UASB LIBRARY
Newspaper Clippings
Pg .1 Wednesday 19-05-2021 Jai Kisan



ಕೆಂಪೆಯಿಂದ ರೋಬೋಟ್‌ವರೆಗೆ

ಯಾಂತ್ರೀಕೃತ ಕೃಷಿ





ತಂತ್ರಜ್ಞಾನದ ಪಾತ್ರ

ಸಂಪೂರ್ಣ ಕೃಷಿ ಪ್ರಕ್ರಿಯೆಯು ವಿವಿಧ ಹಂತಗಳನ್ನು ದಾಟುತ್ತ ಅನೇಕ ತಂತ್ರಜ್ಞಾನಗಳನ್ನು ಬಳಸುತ್ತ ಸಾಗುತ್ತದೆ. ಇಲ್ಲಿ ಸಂವೇದಕಗಳು ಬೆಳೆಯನ್ನು ಮೊದಲಿನಿಂದಲೂ ಮೇಲ್ವಿಚಾರಣೆ ಮಾಡುತ್ತವೆ. ಡ್ರೋಣ್‌ನಂತಹ ಸಂವೇದನಾ ವೇದಿಕೆಗಳು ಸಹ ನೈಜ ಮಾಹಿತಿಯನ್ನು ಚಿತ್ರಗಳ ಮೂಲಕ ಕೊಡುವುದಲ್ಲದೇ, ಇತರೇ ನಿಯತಾಂಕಗಳನ್ನು (Parameter) ಸೆರೆಹಿಡಿಯುತ್ತವೆ. ಬೆಳೆಯ ಪ್ರಗತಿಯ ಬಗ್ಗೆ ರೈತರಿಗೆ ಎಚ್ಚರಿಸಿ, ಮಣ್ಣು, ಕೀಟಗಳು, ರೋಗಗಳು ಮತ್ತು ಕಳೆಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. ಅದರೊಂದಿಗೆ ಬೆಳಕು, ತೇವಾಂಶ, ತಾಪಮಾನ ಮತ್ತು ಮಣ್ಣಿನ ಮಾದರಿಯ ಸಂವೇದಕಗಳನ್ನು ಬಳಸಿ ನಿಯತಾಂಕಗಳನ್ನು ಪಡೆಯುತ್ತಾರೆ. ಸಂವೇದಕಗಳಿಂದ ದೊರೆತ ಮಾಹಿತಿಯನ್ನು ದತ್ತಾಂಶಗಳ ರೂಪಕ್ಕೆ ವರ್ಗಾಯಿಸಿ ನಿರ್ದಿಷ್ಟ ಸಾಫ್ಟ್‌ವೇರ್ ಇಲ್ಲವೇ ಕೃತಕ ಬುದ್ಧಿಮತ್ತೆಯ (Artificial Intelligence) ಸಹಾಯದಿಂದ ಸಂಸ್ಕರಿಸಲಾಗುತ್ತದೆ. ಈ ತಂತ್ರಜ್ಞಾನದಲ್ಲಿ ಮುಖ್ಯವಾಗಿ ಬಹಳ ದತ್ತಾಂಶವನ್ನು ಉಪಯೋಗಿಸಿ ಗಣಕಯಂತ್ರಗಳಲ್ಲಿ ಕೆಲವು ಅಲ್ಗೋರಿಥಮ್‌ಗಳ ಮೂಲಕ ಮನುಷ್ಯನಂತೆಯೇ ವರ್ತಿಸಿ, ವಿಚಾರಿಸಿ, ನಿರ್ಧಾರ ತೆಗೆದುಕೊಳ್ಳುವ ತರಬೇತಿ ನೀಡಲಾಗಿರುತ್ತದೆ. ಅದಕ್ಕಾಗಿಯೇ ಮಾಹಿತಿ ಅಥವಾ ನಡುವಳಿಕೆಯನ್ನು ಸಂಸ್ಕರಿಸುವ ತಮ್ಮದೇ ಆದ ತರ್ಕಬದ್ಧ ಮಾರ್ಗವನ್ನು ಹೊಂದಿವೆ. ನಂತರದಲ್ಲಿ ಬ್ಲಾಕ್‌ಚೈನ್ ತಂತ್ರಜ್ಞಾನದ ಮೂಲಕ ಬೆಳೆಯ ಸಾಗಾಣಿಕೆ, ಸಂಗ್ರಹ, ಗ್ರೇಡಿಂಗ್, ಪ್ಯಾಕೇಜಿಂಗ್, ಲೇಬಲಿಂಗ್, ಸಂಸ್ಕರಣೆಯಂತಹ ಚಟುವಟಿಕೆಗಳು ಸರಳವಾಗಿ ಮತ್ತು ಸುರಕ್ಷಿತವಾಗಿ, ಲೋಪವಿಲ್ಲದೇ ನಡೆಯುತ್ತವೆ. ನಂತರ ಸ್ವಯಂಚಾಲಿತ ಯಂತ್ರಗಳಿಂದ ಅಥವಾ ತಮ್ಮದೇ ಉಪಕರಣಗಳಿಂದ ರೈತರು ತಮ್ಮ ಮುಂದಿನ ಕಾರ್ಯತಂತ್ರಗಳನ್ನು ರೂಪಿಸುತ್ತಾರೆ.ಇದರೊಂದಿಗೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳಾದ ತಂತಿರಹಿತ (Wirele) ನೆಟ್‌ವರ್ಕ್‌ಗಳು, ಬ್ಲೂಟೂತ್, ಅಂತರ್ಜಾಲ (Internet), ಮೊಬೈಲ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ.

ಸಂಪೂರ್ಣ ವಿದ್ಯಾಭ್ಯಾಸ ಮುಗಿಸಿಕೊಂಡು ಹುಟ್ಟೂರಿನ ಜನರಿಗೆ ಸೇವೆ ಸಲ್ಲಿಸುವ ಉದ್ದೇಶದಿಂದ ರಾಜೂ ಮರಳಿ ಬರುತ್ತಾನೆ. ಕೇವಲ 4 ಎಕರೆ ಕೃಷಿ ಜಮೀನು ಹೊಂದಿದ್ದ ತಂದೆಯ ಕಷ್ಟ ಅರಿತಿದ್ದ ರಾಜೂಗೆ, ಅವರು ಅನುಸರಿಸುತ್ತಿದ್ದ ಸಾಂಪ್ರದಾಯಿಕ ವ್ಯವಸಾಯ ಪದ್ಧತಿಗಳು ಬಹಳ ಲಾಭ ತರಲಾರವೆಂದು ಮನವರಿಕೆಯಾಗಿತ್ತು. ಈ ದಿಸೆಯಲ್ಲಿ ತನ್ನ ವಿದ್ಯೆ ಮತ್ತು ತಂತ್ರಜ್ಞಾನದ ಮೂಲಕ ಆಧುನಿಕ ವ್ಯವಸಾಯ ಪದ್ಧತಿ ಅಳವಡಿಸಿಕೊಂಡು ಹೊಸ ಸಂಚಲನವನ್ನು ತರುವ ವಿಚಾರ ಅವನದಾಗಿತ್ತು.

ಹೆಚ್ಚುತ್ತಿರುವ ಜನಸಂಖ್ಯೆ, ಪ್ರತಿಕೂಲ ಹವಾಮಾನ ಪರಿಸ್ಥಿತಿ, ಸೀಮಿತ ಕೃಷಿ ಪ್ರದೇಶದಂತಹ ಸವಾಲುಗಳ ಹಿನ್ನೆಲೆಯಲ್ಲಿ ಇಂದು ಕೃಷಿಕ್ಷೇತ್ರದಲ್ಲಿ ಹೊಸತನದ ಸಂಶೋಧನೆ ಅನಿವಾರ್ಯವಾಗಿದೆ. ಪ್ರಸ್ತುತವಾಗಿ ಅಗ್ರಿಕಲ್ಚರ್ 4.0 ತಂತ್ರಜ್ಞಾನದಲ್ಲಿ ಹೊಸ ಸಂಶೋಧನೆಗಳುನಡೆದಿದ್ದು, ಆಧುನಿಕ ಉಪಕರಣಗಳು, ಹೊಸ ತಂತ್ರಜ್ಞಾನ, ನಿಖರ ಕೃಷಿಗೆ ದಾರಿ ಮಾಡಿವೆ. ಅಗ್ರಿಕಲ್ಚರ್ 4.0 ತಂತ್ರಜ್ಞಾನ ಮತ್ತು ಸಾಂಪ್ರದಾಯಿಕ ಕೃಷಿಯಲ್ಲಿರುವ ವ್ಯತ್ಯಾಸ ಅಜಗಜಾಂತರವಾಗಿದೆ. ಸಾಂಪ್ರದಾಯಿಕ ಕೃಷಿಯಲ್ಲಿ ಸಾದೃಶ್ಯ (Anology) ತಂತ್ರ, ಯಾವುದೇ ತರಹದ ಸಂವೇದಕಗಳನ್ನು (Sensor) ಬಳಸದಿರುವುದು, ದತ್ತಾಂಶ, ದಾಖಲೆ, ಕೈಪಿಡಿಗಳಲ್ಲದಿರುವುದು, ಮನುಷ್ಯ ಅಥವಾ ಪ್ರಾಣಿಗಳ ಬಳಕೆ,ಕೃಷಿಕನಅನುಭವಮಾತ್ರ ಆಧಾರವಾಗಿರುವುದು. ಅಗ್ರಿಕಲ್ಚರ್ 4.0 ತಂತ್ರಜ್ಞಾನದಲ್ಲಿ ಇಂಟರ್ನೆಟ್ ಆಫ್ ಥಿಂಗ್ಸ್ (IoT) ಮೂಲಕ ಸಂವೇದಕಗಳ ಬಳಕೆ, ದತ್ತಾಂಶ ಸಂಗ್ರಹ, ಡ್ರೋಣ್ ಮತ್ತು ರೋಬೋಟ್‌ಗಳ ಬಳಕೆ, ಆಧುನಿಕ ಉಪಕರಣಗಳು, ಉಪಗ್ರಹದಿಂದ ತೆಗೆದ ಚಿತ್ರಗಳು, ಸ್ಥಾನೀಕರಣವನ್ನು ಬಳಸಿ ಕೃಷಿಯನ್ನು ಸ್ಮಾರ್ಟ್ ಆಗಿಸುವತ್ತ ಪ್ರಯತ್ನ ಸಾಗಿದೆ. ಈ ತಂತ್ರಜ್ಞಾನದಿಂದ ತ್ಯಾಜ್ಯವನ್ನು ಕ್ಷೀಣಿಸಿ, ಕಡಿಮೆ ಸಮಯದಲ್ಲಿ ಒಳ್ಳೆಯ ಗುಣಮಟ್ಟದ ಹೆಚ್ಚು ಇಳುವರಿ ಪಡೆಯುವ ಉದ್ದೇಶವಿದೆ.

ಸವಾಲು ಇದೆ

ಆದರೆ ಅಭಿವೃದ್ಧಿಯೊಂದಿಗೆ ಸವಾಲುಗಳ ಸರಮಾಲೆಯೇ ಎದುರಾಗಿದೆ. ದತ್ತಾಂಶದ ಮಾಲೀಕತ್ವ ಮತ್ತು ನಿರ್ವಹಣೆಗೆ ಕಾನೂನು ಮತ್ತು ನಿರ್ಬಂಧಗಳು ಕೃಷಿಕನ ಪರವಾಗಿರುವಂತೆ ರೂಪಗೊಂಡು, ಅನಧಿಕೃತ ಬಳಕೆದಾರರನ್ನು ನಿಯಂತ್ರಿಸಬೇಕು. ಕೃಷಿಕರಿಗೆ ಈ ತಂತ್ರಜ್ಞಾನದ ಬಳಕೆಯಬುದ್ಧಿಮತ್ತೆ, ಸಾಮರ್ಥ್ಯ ಮತ್ತು ಯೋಗ್ಯತೆಗಳ ಕೊರತೆ ಇದೆ. ಮೇಲಾಗಿ ಈ ಬದಲಾವಣೆಗೆ ಹೊಂದಿಕೊಳ್ಳುವ ಮತ್ತು ಒಪ್ಪಿಕೊಳ್ಳುವ ಮನಸ್ಥಿತಿಯು ಇಲ್ಲ. ಶೈಕ್ಷಣಿಕ ಮಟ್ಟದಲ್ಲಿ ರೂಪಾಂತರದ ಅಗತ್ಯ ಮತ್ತು ಶಿಕ್ಷಣ ಕಾರ್ಯಕ್ರಮಗಳ ಬದಲಾವಣೆ ಮುಖ್ಯವಾಗಿದೆ. ಈ ಸಮಸ್ಯೆಗಳನ್ನು ಬದಿಗಿಟ್ಟು ವಿಚಾರ ಮಾಡಿದರೆ ಹಸಿವು ಮತ್ತು ಬಡತನ ನಿರ್ಮೂಲನೆ, ಆರ್ಥಿಕ ಬೆಳವಣಿಗೆ, ಹೊಸ ಉದ್ಯಮಗಳ ಆನ್ವೇಷಣೆ, ನಾವೀನ್ಯತೆ ಮತ್ತು ಮೂಲಸೌಕರ್ಯಗಳು, ಬೇಡಿಕೆಗೆ ತಕ್ಕ ಉತ್ಪಾದನೆಯಂತಹ ವಿಷಯಗಳು ಭೂಮಿಯ ಮೇಲಿನ ಜೀವನವನ್ನು ಸಮೃದ್ಧ ಮತ್ತು ಸಾಕಾರಗೊಳಿಸುತ್ತವೆ. ಈ ಎಲ್ಲ ವಿಷಯಗಳನ್ನು ತಂದೆಗೆ ತಿಳಿಸಿ ಕೆಲವು ಚಿತ್ರಗಳನ್ನು ತನ್ನ ಫೋನಿನಲ್ಲಿ ತೋರಿಸಿದಾಗ, ಅವರು ಆಶ್ಚರ್ಯಚಕಿತರಾಗಿ, ಅಸಾಧ್ಯ ಎಂದು ತಿಳಿದಿದ್ದು, ಸಾಧ್ಯ ಎಂದು ತೋರಿಸಿದಾಗ ಮೂಕವಿಸ್ಮಿತರಾಗುತ್ತಾರೆ. ಅದೇ ಮೊಬೈಲ್‌ನಲ್ಲಿ ಕುಳಿತಲ್ಲಿಂದ ಹೊಲದ ಮಾಹಿತಿ ಸಂಗ್ರಹ ಮತ್ತು ನಿರ್ವಹಣೆ ಸಾಧ್ಯವಾಗಿದ್ದು ಬಲು ಉಪಯೋಗಿ ಆವಿಷ್ಕಾರ ಎಂದು ಕೊಂಡಾಡುತ್ತಾರೆ. ಪ್ರತಿಭಾ ಪಲಾಯನವಾಗದೇ ಎಲ್ಲರೂ, ತಮ್ಮ ಮಗನಂತೆ ಮರಳಿ ಊರಿಗೆ ಬಂದು ಜ್ಞಾನದದಾಸೋಹ ಹರಿಸಿದರೆ ಯಾರೂ ಹಸಿವಿನಿಂದ ಬಳಲಲು ಸಾಧ್ಯವಿಲ್ಲ ಎಂದು ಮನಸಾರೆ ಮಗನ ಬೆನ್ನು ತಟ್ಟುತ್ತಾರೆ. ರೈತನೇ ದೇಶದ ಬೆನ್ನೆಲುಬು ಎಂಬ ಗಾದೆ ಈಗ ಅರ್ಥಗರ್ಭಿತವಾಗುತ್ತದೆ.

ಶಕ್ತಿ ಉಳಿಸಿ ಯುಕ್ತಿ ಬಳಸು,
ತಂತ್ರ ಬೇಡ ತಂತ್ರಜ್ಞಾನ ಬಳಸು,
ಪ್ರಾಣಿ ಬೇಡ ರೋಬೋಟ್ ಬಳಸು, ಸಾಲಗಾರನಾಗಬೇಡ ಸಾಹುಕಾರನಾಗು, ನಿನ್ನ ಹಸಿವಲ್ಲ ಜಗತ್ತಿನ ಹಸಿವು ನೀಗಿಸು.



■ ಸುನೀತಾ ವಿ ಬೂದಿಹಾಳ
ಉಪನ್ಯಾಸಕಿ, ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ,ಹುಬ್ಬಳ್ಳಿ

19-05-2021 Sk Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

UASB LIBRARY
Newspaper Clippings
Pg .2 Wednesday 19-05-2021 Jai Kisan



ಸಾವಯವ ಬೆಲ್ಲಕ್ಕೆ ಬೇಡಿಕೆ!

ಮುಧೋಳ(ಬಾಗಲಕೋಟೆ): ಮೊದಲಿನಿಂದಲೂ ಮನೆ ಮದ್ದು ಎಂದು ರೂಢಿಗತವಾಗಿರುವ ಸಾವಯವ ಬೆಲ್ಲಕ್ಕೆ ಕೊರೊನಾ ಕಾಲದಲ್ಲಿ ಭಾರಿ ಬೇಡಿಕೆ ಉಂಟಾಗಿದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಜನರು ಈಗಾಗಲೇ ನಾನಾ ಕಸರತ್ತು ಮಾಡುತ್ತಿದ್ದಾರೆ. ಉತ್ತಮ ಆರೋಗ್ಯಕ್ಕೆ ಇದು ಉಪಯುಕ್ತ ಎಂಬ ಅಭಿಪ್ರಾಯಗಳು ವೈದ್ಯರಿಂದ ವ್ಯಕ್ತವಾಗಿವೆ.



ಜಿಲ್ಲೆಯ ನಾನಾ ತಾಲೂಕಿನ ನೂರಾರು ಕಬ್ಬು ಬೆಳೆದ ರೈತರು ಸಾವಯವ ಬೆಲ್ಲ ಉತ್ಪಾದನೆ ಮಾಡಲು ಜಾಗರಿ ಪಾರ್ಕ್ ಜತೆಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಕೆಲವು ರೈತರು ತಾವೇ ಆಲೆಮನೆಗಳಲ್ಲಿ ಸಿದ್ಧಗೊಳಿಸುತ್ತಿದ್ದಾರೆ. ಇಲ್ಲಿ ಉತ್ಪಾದನೆಯಾಗುವ ಬೆಲ್ಲ ರಾಜ್ಯ ಹಾಗೂ ಅಂತಾರಾಜ್ಯಗಳಿಗೂ ಲಾಕ್‌ಡೌನ್ ವೇಳೆಯೂ ಮಾರಾಟವಾಗುತ್ತಿದೆ. ಕಳೆದ 3 ತಿಂಗಳಿಂದ ಬೇಡಿಕೆ ಮತ್ತಷ್ಟು ಹೆಚ್ಚಿದೆ ಎನ್ನುತ್ತಾರೆ ನಗರದ ವ್ಯಾಪಾರಸ್ಥ ಮಂಜುನಾಥ.

19-05-2021 Vv Pg 01

9,264 ಹುದ್ದೆಗಳ ಭರ್ತಿಗೆ ಕ್ರಮ

ಬೆಂಗಳೂರು: ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಸೇರಿ ವಿವಿಧ ಇಲಾಖೆಗಳ ಒಟ್ಟು 9,264 ಹುದ್ದೆಗಳಿಗೆ ಕಾಯಂ, ತಾತ್ಕಾಲಿಕ ಹಾಗೂ ನಿಯೋಜನೆ ಮೂಲಕ ನೇಮಕಾತಿಗೆ ರಾಜ್ಯ ಸರ್ಕಾರ ಹಸಿರುನಿಶಾನೆ ತೋರಿದೆ. ಕೃಷಿ ಸೇವೆಗಳು (ವೃಂದ ಮತ್ತು ನೇಮಕ) ನಿಯಮಗಳು 2021 ಅಧಿಸೂಚನೆ ರಾಜ್ಯಪತ್ರದಲ್ಲಿ ಪ್ರಕಟಿಸುವುದರೊಂದಿಗೆ ಭರ್ತಿ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಸಹಾಯಕ ಕೃಷಿ ನಿರ್ದೇಶಕರು, ಪ್ರಥಮ, ದ್ವಿತೀಯ ದರ್ಜೆ ಸಹಾಯಕರು ಸೇರಿ 738 ಕಾಯಂ, 8244 ತಾತ್ಕಾಲಿಕ ಮತ್ತು 2820 ನಿಯೋಜನೆ ಮೂಲಕ ಒಟ್ಟು 9264 ಹುದ್ದೆಗಳಿಗೆ ನೇಮಕಕ್ಕೆ 'ಕರ್ನಾಟಕ ಕೃಷಿ ಸೇವೆಗಳು (ವೃಂದ ಮತ್ತು ನೇಮಕ) ನಿಯಮಗಳು 2021' ರಹದಾರಿ ಕಲ್ಪಿಸಿದೆ.

19-05-2021 Vk Pg 06

ಕೆ.ಜಿ.ಗೆ 10-40 ರೂ.ನಂತೆ ದಲ್ಲಾಳಿಗೆ ಮಾರಾಟ | ಚಿಲ್ಲರೆ ಮಾರುಕಟ್ಟೆಯಲ್ಲಿ ದುಬಾರಿ ದರ

ಮಾವು ಕೊಯ್ಲಿಗೆ ಬಂದರೂ ಬೇಡಿಕೆ ಇಲ್ಲ, ಬೆಲೆಯೂ ಇಲ್ಲ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ಮಾವು ಕೊಯ್ಲಿಗೆ ಬಂದರೂ ಕೊರೊನಾದಿಂದಾಗಿ ಸೂಕ್ತ ಮಾರುಕಟ್ಟೆ, ಉತ್ತಮ ಬೆಲೆ ಇಲ್ಲದೆ ಬೆಳೆಗಾರರು ತತ್ತರಿಸುವಂತಾಗಿದೆ. ಈ ನಡುವೆ ಮಳೆ, ಗಾಳಿಯ ಹೊಡೆತವೂ ಬೆಳೆಗಾರರನ್ನು ಜರ್ಜರಿತಗೊಳಿಸಿದೆ.

ಕೊರೊನಾದಿಂದ ಹೆಚ್ಚು ದರ ಸಿಗದು ಎಂದು ಹಲವಾರು ರೈತರು ತೋಟದಲ್ಲೇ ದಲ್ಲಾಳಿಗಳಿಗೆ ಮಾವನ್ನು ಮಾರಿದ್ದಾರೆ. ಬಾದಾಮಿ, ಅಲ್ಫಾನ್ಸೋದಂತಹ ಮಾವಿನ ಫಸಲನ್ನು ಕೂಡ ದಲ್ಲಾಳಿಗಳು ಕೆ.ಜಿ.ಗೆ 10-40 ರೂ. ದರದಲ್ಲಿಗುತ್ತಿಗೆ ಪಡೆದಿದ್ದಾರೆ. ಅಲ್ಫಾನ್ಸೋ, ಬಾದಾಮಿ ಮಾವು ಮಾರುಕಟ್ಟೆಯಲ್ಲಿ 120-180 ರೂ.ವರೆಗೆ ಮಾರಾಟವಾಗುತ್ತಿದೆ. ಮಧ್ಯವರ್ತಿಗಳಿಂದಾಗಿ ಬೆಳೆಗಾರರಿಗೂ ಬೆಲೆ ಸಿಗುತ್ತಿಲ್ಲ. ಗ್ರಾಹಕರಿಗೂ ಲಾಭ ಸಿಗುತ್ತಿಲ್ಲ ಎನ್ನುವಂತಾಗಿದೆ.

ಕೊರೊನಾ ಕಾರಣದಿಂದ ಈ ಬಾರಿ ಮಾವು ಮೇಳ ನಡೆಯುತ್ತಿಲ್ಲ. ನಗರ ಪ್ರದೇಶಕ್ಕೆ ಕೊಂಡೊಯ್ದು ಮಾರಾಟ ಮಾಡಲು ಕೊರೊನಾ ಆತಂಕವಿದೆ. ಹೀಗಾಗಿ ಸಿಕ್ಕಷ್ಟು ಹಣಕ್ಕೆ ಬೆಳೆಗಾರರು ತೃಪ್ತಿಪಡುವಂತಾಗಿದೆ. ಗಾಳಿ, ಮಳೆಯಿಂದ ಹಣ್ಣುಗಳು ಉದುರಿ ಹಾಳಾಗುತ್ತಿರುವುದು ಬೆಳೆಗಾರರನ್ನು ಚಿಂತೆಗೀಡಾಗುವಂತೆ ಮಾಡಿದೆ.



ಫಸಲು ಪ್ರಮಾಣ ಇಳಿಕೆ: ಮಾವು ಬೆಳೆ ಹೂ ಬಿಟ್ಟ ಆರಂಭದಲ್ಲಿ ಈ ವರ್ಷ ರಾಜ್ಯದಲ್ಲಿ ಬರೋಬ್ಬರಿ 13-14 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿತ್ತು. ಆದರೆ, ಹವಾಮಾನ ವೈಪರಿತ್ಯದಿಂದಾಗಿ 8-9 ಲಕ್ಷ ಟನ್ ಮಾವು ಫಸಲು ನಿರೀಕ್ಷಿಸಬಹುದಾಗಿದೆ. ಈಗಾಗಲೇ ರಾಮನಗರ ಭಾಗದ ಮಾವು ಮುಗಿಯುವ ಹಂತದಲ್ಲಿದೆ. ಇದೀಗ ಕೋಲಾರ, ಶ್ರೀನಿವಾಸಪುರ ಭಾಗದ ಮಾವು ಫಸಲು ಆರಂಭವಾಗಿದೆ.

ಉತ್ತರ ಪ್ರದೇಶದ ದಸ್ಸೇರಿ, ಗುಜರಾತ್‌ನ ಕೇಸರಿ, ಬನಾರಸ್‌ನ ಲಂಗ್ಡಾ, ಮಹಾರಾಷ್ಟ್ರದ ಆಪೂಸ್ ಮತ್ತು ರತ್ನಗಿರಿ, ಗೋವಾದ ಆಲ್ಫಾನ್ಸೋ ಹೊರತುಪಡಿಸಿದರೆ ಹೆಚ್ಚಿನ ಹಣ್ಣುಗಳು ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದಲೇ ಇಲ್ಲಿಗೆ ಮಾವು ಬರುತ್ತದೆ. ಸಿಂಗೇನ ಅಗ್ರಹಾರದ ಹಣ್ಣನ್ನ ಮಾರುಕಟ್ಟೆಗೆ ಆಂಧ್ರಪ್ರದೇಶದಿಂದ ನಿತ್ಯ ನೂರು ಗಾಡಿ ಮಾವು ಬರುತ್ತಿದೆ. ಕೋಲಾರ ಸುತ್ತಮುತ್ತಲಿನ ಮಾವು ಶ್ರೀನಿವಾಸಪುರ ಮಾವು ಮಾರುಕಟ್ಟೆಗೆ ಹೋಗುತ್ತಿದೆ.

ಗ್ರಾಹಕರಿಗೆ ನೇರವಾಗಿ ಮಾರಾಟ

''ನಾವು 80 ಹೆಕ್ಟೇರ್‌ನಲ್ಲಿ ಆಲ್ಫಾನ್ಸೋ ಮಾವು ಬೆಳೆಯುತ್ತಿದ್ದು, 150 ಟನ್ ಉತ್ಪಾದನೆಯಾಗಲಿದೆ. ತೋಟದಲ್ಲೇ ಮಾರೋಣವೆಂದರೆ ಅತ್ಯಂತ ಕಡಿಮೆ ಬೆಲೆಗೆ ಕೇಳುತ್ತಾರೆ. ಆ ರಗಳೆಯೇ ಬೇಡವೆಂದು ನಾವೇ ಬೆಂಗಳೂರಿನ ನಾನಾ ಭಾಗಗಳಿಗೆ ಟೆಂಪೋದಲ್ಲಿ ಕೊಂಡೊಯ್ದು ಮಾರುತ್ತಿದ್ದೇವೆ. ಒಮ್ಮೆಲೆಗೆ ಕೀಳದೆ ಹಣ್ಣಾಗುವ ಹಂತದಲ್ಲಿರುವ ಮಾವನ್ನು ಹುಡುಕಿ ಕೀಳಿಸುತ್ತೇವೆ. ಎರಡೂವರೆ ತಿಂಗಳ ಕಾಲ ಕೊಯ್ಲು ಮಾಡಿ ನೇರವಾಗಿ ಗ್ರಾಹಕರಿಗೆ ಮಾರುತ್ತೇವೆ. ಪ್ರತಿ ವರ್ಷ 100-150 ಟನ್‌ವರೆಗೆ ಮಾರುತ್ತೇನೆ. ಮಾರುಕಟ್ಟೆಗೆ ಕೊಡುವುದಿಲ್ಲ. ಒಂದು ವೇಳೆ ಹೆಚ್ಚಾದರೆ ಹಾಪ್‌ಕಾಮ್ಸ್ ಗೆ ಮಾರುತ್ತೇವೆ'' ಎಂದು ಗೌರಿಬಿದನೂರಿನ ಶ್ರೀ ರಾಜೇಶ್ವರಿ ಫಾರ್ಮ್ಸ್‌ನ ಕೆ. ಜನಾರ್ಧನ ನಾಯ್ಡು ಹೇಳಿದರು. ''ಸರಕಾರ ರಾಗಿ, ಜೋಳ, ಭತ್ತ ಮತ್ತಿತರ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿರುವಂತೆ ವಾರ್ಷಿಕ ಬೆಳೆಯಾದ ಮಾವಿಗೂ ಬೆಂಬಲ ಬೆಲೆ ಘೋಷಿಸಬೇಕು,'' ಎಂದು ಅವರು ಒತ್ತಾಯಿಸಿದರು.

19-05-2021 Vk Pg 07